ನಿರತರಾದ ನಾರಿರತ್ನಗಳಿಂದ ಚಾವಡಿ ಕಲರವಿಸುತ್ತಿತ್ತು. ಬೆಳಗಾದರೆ ಒಂಬತ್ತನೆಯ ದಿವಸ. ವ್ರತ ಮುಗಿಯುವುದು. ದೇವಿಯನ್ನು ಬೀಳ್ಕೊಡಲಾಗುವುದು. ಆ ಎಂಟನೆಯ ದಿನದ ರಾತ್ರಿ ಸಾವಿತ್ರಿದೇವಿಯ ಉಜ್ವಲರೂಪ ದರ್ಶನೀಯ. ಕಡೆಯ ದಿನವಾದುದರಿಂದ ಆ ದಿನ ವ್ರತ ಹಿಡಿದವರೇ ಅಲ್ಲದೆ ನೋಡಲು ಬಂದ ಮುತ್ತೈದೆಯರು ಗುಂಪು ಗುಂಪು. ಅವರಷ್ಟು ದಿನಗಳಿಂದ ಬೆಳಗು, ಸಂಜೆಗಳಲ್ಲಿ ನೆರವೇರಿಸಿದ ಪೂಜೆಗಳಿಂದ ಇಂದು ದೇವೀ ರೂಪವು ಅರಿಶಿನ ಕುಂಕುಮಗಳ ಗುಡ್ಡೆ, ಪುಷ್ಪಾಕ್ಷತೆಗಳ ರಾಶಿ, ಅವಳ ಸುತ್ತ ಭಕ್ತಿ ಉತ್ಸಾಹಗಳಿಂದ ವಿನಮ್ರರಾಗಿ ದೇವಿಯನ್ನು ಅರ್ಚಿಸುವ ಸ್ತ್ರೀಯರು, ಎಲ್ಲಿ ನೋಡಿದರೂ ದೀಪಗಳು! ಎಲ್ಲಿ ನೋಡಿದರೂ ಪುಡಿ ರಂಗೋಲೆಗಳು! ಎಲ್ಲಿ ನೋಡಿದರೂ ಅರಿಶಿನ ಕುಂಕುಮಗಳು! ಎಲ್ಲಿ ನೋಡಿದರೂ ಕರ್ಪೂರ ದಾರತಿಗಳು! ಎಲ್ಲಿ ನೋಡಿದರೂ ನೈವೇದ್ಯ ಪದಾರ್ಥಗಳು! ಆಹೋ! ಆ ರಾತ್ರಿಯ ವೇಳೆ ಆ ದೀಪಗಳ ಸನ್ನಿಧಿಯಲ್ಲಿ, ಆ ದೇವಿಮೂರ್ತಿಯ ಮುಂದೆ ಶುದ್ಧ ಖದ್ದರು ವಸ್ತ್ರಧಾರಿಣಿಯರಾಗಿ ನಿಶ್ಚಲ ದೀಕ್ಷೆಯಿಂದ ದೇವಿಯನ್ನು ವರಿಸುತ್ತಿರುವ ಆ ಮಾನವತೀ ಮಾನಸಗಳಲ್ಲಿ ಎಂತಹ ಭಾವಗಳು, ಎಂಥ ಆಕಾಂಕ್ಷೆಗಳು, ಎಂತಹ ಸಂಕಲ್ಪಗಳು ಹುಟ್ಟಿ ಆ ದೇವಿಗೆ ನಿವೇದಿಸಲಾಗುತ್ತಿವೆಯೋ ಯಾರಿಗೆ ಗೊತ್ತು?

## 11

ಇಂದಿಗೆ ಗೋಪಾಲರಾಯ ಸೆರೆಗೆ ಹೋಗಿ ಐದು ತಿಂಗಳ ಇಪ್ಪತ್ತು ದಿನಗಳು. ಉಳಿದ ಹತ್ತು ದಿನಗಳನ್ನು ರುಕ್ಮಿಣಿ ಬೆರಳುಗಳ ಮೇಲೆ ಎಣಿಸುತ್ತಿದ್ದಳು. ಆದರೆ ಗೋಪಾಲರಾಯ ತನ್ನ ಸದ್‌ವರ್ತನೆಯಿಂದ ಶಿಕ್ಷಾ ಕಾಲದಲ್ಲಿ ಹನ್ನೆರಡು ದಿನಗಳು ಮುನ್ನವೇ ಬಿಡುಗಡೆ ಗೊಂಡು ಬರುವನೆಂದು ಅವಳಿಗೇನು ಗೊತ್ತು? ರಾತ್ರಿ ಎಂಟು ಗಂಟೆಗೆ ಪಡುವಣದಿಂದ ಬರುವ ಬಂಡಿ ಬಂದಿತು. ಹೋಯಿತು. ಹೋಗುತ್ತ ಕೂಗೂ ಹಾಕಿತು. ಯಾರೂ ಕೇಳಿಸಿಕೊಳ್ಳಲಿಲ್ಲ. ತಮ್ಮ ಸಾವಿತ್ರೀ ಪೂಜೆಯ ಸಂಭ್ರಮದಲ್ಲಿ ಆ ಯುವತಿಯರಿಗೆ ರೈಲು ಬಂದು ಹೋದುದೇನು ತಿಳಿದೀತು.

ರೈಲು ಬಂದು ಹೋದ ಇಪ್ಪತ್ತು ನಿಮಿಷಕ್ಕೆ ಮನೆತುಂಬಾ ಕಿಕ್ಕಿರಿದಿದ್ದ ನಾರೀಮಣಿಗಳಲ್ಲಿ 'ಗೋಪಾಲರಾಯರು ಬಂದರು, ಗೋಪಾಲ ರಾಯರು ಬಂದರು' ಎಂದು ಒಂದು ಚಿಕ್ಕ ಗದ್ದಲ ಹುಟ್ಟಿ ರುಕ್ಮಿಣಿಯ ಕಿವಿ ತಾಕಿತು. ತಾಕಿದ್ದೇ ತಡ, ಇನ್ನವಳ ಆನಂದಾರಾಶಿಗೆ ಪಾರವೆಲ್ಲಿಯದು? ದೇವಿಗಾಗಿ ತಯಾರಿಸಿದ ಕುಸುಮ ಮಾಲೆಗಳು ಇನ್ನೊಬ್ಬರಿಗೆ ಬಳಸಬಹುದೇ ಎಂಬ ಆಲೋಚನೆ ಎಲ್ಲಿಂದು? ಅವಳ ದೃಷ್ಟಿಯಲ್ಲಿ ಪತಿಯೂ ದೈವವೇ. ದೇವಿಗೆ ಸಮರ್ಪಿಸಲು ಕಟ್ಟಿಟ್ಟ ಹೂಮಾಲೆಯನ್ನು ಕೈಗೆತ್ತಿಕೊಂಡು ಒಂದು ಜಿಗಿತದಲ್ಲಿ ಗಂಡನ ದರ್ಶನಕ್ಕೆ ಹೊರಟಳು, ರುಕ್ಮಿಣಿ. ಕೈಯಲ್ಲಿದ್ದ ಮಾಲೆಯನ್ನು ಕೈಗೆ ಕೊಡುವುದೋ, ಕೊರಳಿಗೆ ಹಾಕುವುದೋ, ಚರಣ ಯುಗಳಕ್ಕೆ ಅರ್ಪಿಸುವುದೋ–ರುಕ್ಮಿಣಿಯ ಸಂಕಲ್ಪವಾಗ ಯಾವ ರೀತಿಯದಾಗಿತ್ತೋ ಆದರೆ ಕುಸುಮಮಾಲೆ ಹಿಡಿದು ಉತ್ಕಂಠತೆಯಿಂದ ಬರುತ್ತಿದ್ದ ರುಕ್ಮಿಣಿಯನ್ನು ಅಲ್ಲಿಂದಲೇ ನೋಡಿದ ಗೋಪಾಲರಾಯ. ದೇಹ ನವೆದಿದೆ, ಮುಖ ಬತ್ತಿದೆ. ರೂಪ ಬದಲಾಗಿದೆ. ಆದರೆ ಪ್ರಕಾಶಿಸುವ ಆ ಕಣ್ಣುಗಳಲ್ಲಿ ಕಾಣಿಸುವ ಆ ದೇಶಭಕ್ತಿಗೆ ಕಿಂಚಿದೂನವಿಲ್ಲ.

'ರುಕ್ಮಿಣೀ! ಆ ಹೂಮಾಲೆ ಸೀಮೆ (ವಿದೇಶಿ) ದಾರದಿಂದ ಕಟ್ಟಿರುವುದೇನೊ, ನಾನು ಮುಟ್ಟುವುದಿಲ್ಲ' ಅಂದ ಗೋಪಾಲರಾಯ. ಅನಿಶಿತ ಶರಾಪಾತದಂತಹ ಆ ವಾಕ್ಯ ಪ್ರಯೋಗದಿಂದ ಘಾಸಿಗೊಂಡು ನೆಲಕ್ಕುರುಳಲು ರುಕ್ಮಿಣಿ ಹಿಂದಿನ ರುಕ್ಮಿಣಿಯೇ? ಅಲ್ಲ. ಆ ಯೋಧಪತ್ನಿ ಹೀಗೆ ಧೀರತೆಯಿಂದ ನುಡಿದಳು, 'ಸೀಮೆನೂಲು ನನ್ನ ಕೈಯಿಂದ ತೊಲಗಿ ಐದು ಮಾಸಗಳ ಇಪ್ಪತ್ತು ದಿನಗಳು'.

●

